**ಕರ್ನಾಟಕ ಸರ್ಕಾರ**

ಸಂಖ್ಯೆ: ಡಿಟಿಇ/01/ಇಎಸ್‌ಟಿ(9)/2019 /454

ನಿರ್ದೇಶಕರವರ ಕಛೇರಿ
ತಾಂತ್ರಿಕ ಶಿಕ್ಷಣ ಇಲಾಖೆ
ಬೆಂಗಳೂರು-560 001
ದಿನಾಂಕ:06-06-2019

**-: ಹಿಂಬರಹ :-**

ಕರ್ನಾಟಕ ಸರ್ಕಾರದ ನಡವಳಿ ಆದೇಶ ಸಂಖ್ಯೆ:ಆಇ 19 ಮಕಮು 2018, ಬೆಂಗಳೂರು ದಿನಾಂಕ:17.05.2019ರ ಪ್ರತಿಯನ್ನು ಮಾಹಿತಿಗಾಗಿ ಈ ಕೆಳಕಂಡವರಿಗೆ ಕಳುಹಿಸಲಾಗಿದೆ.

1. ಈ ಇಲಾಖೆಯ ಅಧೀನಕ್ಕೊಳಪಡುವ ಎಲ್ಲಾ ಸರ್ಕಾರಿ ಇಂಜಿನಿಯರಿಂಗ್ ಕಾಲೇಜುಗಳು, ಸರ್ಕಾರಿ ಪಾಲಿಟೆಕ್ನಿಕ್, ಸರ್ಕಾರಿ ಕಿರಿಯ ತಾಂತ್ರಿಕ ಶಾಲೆಗಳು, ಸ್ಟೆರಿಕ್ ಸಂಸ್ಥೆ, ಬೆಂಗಳೂರು, ಸರ್ಕಾರಿ ಗಣಿ ಮತ್ತು ಶಿಕ್ಷಣ ಶಾಲೆ, ಕೆ.ಜಿ. ಎಫ್ ಸಂಸ್ಥೆಗಳ ಪ್ರಿನ್ಸಿಪಾಲರುಗಳಿಗೆ ಮಾಹಿತಿಗಾಗಿ (ಇಲಾಖಾ ವೆಬ್‌ಸೈಟ್ ಮುಖಾಂತರ)
2. ಈ ನಿರ್ದೇಶನಾಲಯದ ಎಲ್ಲಾ ಅಧಿಕಾರಿಗಳಿಗೆ, ಜಂಟಿ ನಿರ್ದೇಶಕರು(ಆಡಳಿತ), ಆಡಳಿತಾಧಿಕಾರಿ, ಸಹಾಯಕ ಆಡಳಿತಾಧಿಕಾರಿ; (1), (2), ಮತ್ತು (3), ಸಾರ್ವಜನಿಕ ಸಂಪರ್ಕಾಧಿಕಾರಿ ಹಾಗೂ ರಿಜಿಸ್ಟ್ರಾರ್(ಆಡಳಿತ), ಮಾಹಿತಿಗಾಗಿ.

4. ನಿರ್ದೇಶಕರ ಆಪ್ತ ಶಾಖೆಗೆ.
5. ನಿರ್ದೇಶನಾಲಯದ ನಗದು ವಿಭಾಗಕ್ಕೆ ಮಾಹಿತಿಗಾಗಿ ಹಾಗೂ ಮುಂದಿನ ಕ್ರಮಕ್ಕಾಗಿ.
6. ನಿರ್ದೇಶನಾಲಯದ ಬಿಯುಡಿ ವಿಭಾಗಕ್ಕೆ ಮಾಹಿತಿಗಾಗಿ ಹಾಗೂ ಮುಂದಿನ ಕ್ರಮಕ್ಕಾಗಿ.
7. ನಿರ್ದೇಶನಾಲಯದ ಇ-ಆಡಳಿತ ವಿಭಾಗಕ್ಕೆ ಮಾಹಿತಿಗಾಗಿ ಹಾಗೂ ಮುಂದಿನ ಕ್ರಮಕ್ಕಾಗಿ.

ಆಡಳಿತಾಧಿಕಾರಿ

C.No-1897

## ಕರ್ನಾಟಕ ಸರ್ಕಾರದ ನಡವಳಿಗಳು

**ವಿಷಯ:** ಸರ್ಕಾರಿ ನೌಕರರಿಗೆ ಮಂಜೂರು ಮಾಡುತ್ತಿರುವ ವಿವಿಧ ಮುಂಗಡಗಳ ಮೂಲ ವೇತನವನ್ನು ನಿಗಧಿಪಡಿಸುವ ಬಗ್ಗೆ.

**ಓದಲಾಗಿದೆ:** 1) ಸರ್ಕಾರದ ಆದೇಶ ಸಂಖ್ಯೆ: ಆಇ 6 ಮಕಮು 2012 ದಿನಾಂಕ:18.06.2012.
2) ಸರ್ಕಾರದ ಆದೇಶ ಸಂಖ್ಯೆ: ಆಇ 6 ಎಸ್.ಆರ್.ಪಿ 2018 ದಿನಾಂಕ:1.03.2018.

**ಪ್ರಸ್ತಾವನೆ:-**

ಮೇಲೆ ಕ್ರಮ ಸಂ(1)ರಲ್ಲಿ ಓದಲಾದ ದಿನಾಂಕ:18.06.2012ರ ಸರ್ಕಾರಿ ಆದೇಶದಲ್ಲಿ ಅಧಿಕಾರಿಗಳ ವೇತನ ಸಮಿತಿಯು ಶಿಫಾರಸ್ಸು ಮಾಡಿರುವಂತೆ ರಾಜ್ಯ ಸರ್ಕಾರಿ ನೌಕರರುಗಳಿಗೆ ಮಂಜೂರು ಮಾಡಬಹುದಾದ ವಿವಿಧ ಮುಂಗಡಗಳ ಮೊತ್ತವನ್ನು ಪರಿಷ್ಕರಿಸಿ ಮೂಲ ವೇತನವನ್ನು ನಿಗಧಿಪಡಿಸಲಾಗಿದೆ. ಮೇಲೆ ಕ್ರಮ ಸಂ(2)ರಲ್ಲಿ ಓದಲಾದ ಸರ್ಕಾರಿ ಆದೇಶದಲ್ಲಿ 6ನೇ ವೇತನ ಆಯೋಗದ ಶಿಫಾರಸ್ಸಿನನ್ವಯ ವೇತನ ಮತ್ತು ಭತ್ಯೆಗಳ ಶಿಫಾರಸ್ಸನ್ನು ಒಪ್ಪಿ ರಾಜ್ಯ ಸರ್ಕಾರಿ ನೌಕರರುಗಳಿಗೆ ದಿನಾಂಕ:1.04.2018ರಿಂದ ಜಾರಿಗೆ ಬರುವಂತೆ ವೇತನವನ್ನು ಪರಿಷ್ಕರಿಸಿ ಆದೇಶಿಸಿದೆ.

6ನೇ ವೇತನ ಆಯೋಗದ 1ನೇ ಸಂಪುಟದ ವರದಿಯಲ್ಲಿ ರಾಜ್ಯ ಸರ್ಕಾರಿ ನೌಕರರಿಗೆ ಮಂಜೂರು ಮಾಡುತ್ತಿರುವ ಮೋಟಾರು ಕಾರು ಖರೀದಿ, ಮೋಟಾರು ಸೈಕಲ್/ಸ್ಕೂಟರ್ ಖರೀದಿ, ಬೈಸಿಕಲ್ ಖರೀದಿ ಹಾಗೂ ಕಂಪ್ಯೂಟರ್ ಖರೀದಿ ಮುಂಗಡದ ಮಿತಿಯನ್ನು ಹೆಚ್ಚಿಸದೇ ಈಗಿನ ಮಿತಿಯನ್ನು ಮುಂದವರೆಸಲು ಶಿಫಾರಸ್ಸು ಮಾಡಿರುತ್ತದೆ.

ಮೇಲೆ ಕ್ರಮ ಸಂ(1)ರ ಓದಲಾದ ದಿನಾಂಕ:19.06.2012ರ ಆದೇಶದಲ್ಲಿ ವಿವಿಧ ಮುಂಗಡಗಳಿಗೆ ನಿಗಧಿಪಡಿಸಲಾಗಿದ್ದ ಕನಿಷ್ಠ ಮೂಲ ವೇತನವು 6ನೇ ವೇತನ ಆಯೋಗದ ಶಿಫಾರಸ್ಸಿನ ಅನುಷ್ಠಾನದಿಂದ ಹೆಚ್ಚಾಳವಾಗಿರುವುದಿಂದ, ಪ್ರಸ್ತುತ ರಾಜ್ಯ ಸರ್ಕಾರಿ ನೌಕರರಿಗೆ ಮಂಜೂರು ಮಾಡುತ್ತಿರುವ ವಿವಿಧ ಮುಂಗಡಗಳ ಕನಿಷ್ಠ ಮೂಲ ವೇತನವನ್ನು ಪರಿಷ್ಕರಿಸಲು ತೀರ್ಮಾನಿಸಿದ ಸರ್ಕಾರವು ಈ ಮುಂದಿನಂತೆ ಆದೇಶಿಸುತ್ತದೆ.

**ಸರ್ಕಾರದ ಆದೇಶ ಸಂಖ್ಯೆ: ಆಇ 19 ಮುಕಮು 2018, ಬೆಂಗಳೂರು, ದಿನಾಂಕ: 17ನೇ ಮೇ 2019**

ಪ್ರಸ್ತಾವನೆಯಲ್ಲಿ ತಿಳಿಸಿರುವ ಅಂಶಗಳ ಹಿನ್ನಲೆಯಲ್ಲಿ, ಸರ್ಕಾರಿ ನೌಕರರಿಗೆ ಪ್ರಸ್ತುತ ಮಂಜೂರು ಮಾಡುತ್ತಿರುವ ವಿವಿಧ ಮುಂಗಡಗಳ ಮೂಲ ವೇತನವನ್ನು ಈ ಕೆಳಕಂಡಂತೆ ಪರಿಷ್ಕರಿಸಿ ಆದೇಶಿಸಿದೆ.

| ಕ್ರ ಸಂ | ಮುಂಗಡಗಳು | ಪ್ರಸ್ತುತ ಜಾರಿಯಲ್ಲಿರುವ ಮೂಲ ವೇತನ | ಪರಿಷ್ಕೃತ ಮೂಲ ವೇತನ |
|---|---|---|---|
| 1. | ಮೋಟಾರು ವಾಹನ ಖರೀದಿ ಮುಂಗಡ | ರೂ.38,100/-ಅಥವಾ ಮೇಲ್ಪಟ್ಟು | ರೂ.67550/- ಅಥವಾ ಮೇಲ್ಪಟ್ಟು |
| 2. | ಮೋಟಾರು ಸೈಕಲ್/ಸ್ಕೂಟರ್ ಖರೀದಿ ಮುಂಗಡ | ರೂ.19.500/- ಅಥವಾ ಮೇಲ್ಪಟ್ಟು | ರೂ.34,300/- ಅಥವಾ ಮೇಲ್ಪಟ್ಟು |
| 3. | ಬೈಸಿಕಲ್ ಖರೀದಿ ಮುಂಗಡ | ರೂ.16,400/- ಅಥವಾ ಮೇಲ್ಪಟ್ಟು | ರೂ.28950/- ಅಥವಾ ಮೇಲ್ಪಟ್ಟು |
| 4. | ಗಣಕ ಯಂತ್ರ ಮುಂಗಡ | ರೂ.22.200/- ಅಥವಾ ಮೇಲ್ಪಟ್ಟು | ರೂ.39,800/- ಅಥವಾ ಮೇಲ್ಪಟ್ಟು |

...2

ದಿನಾಂಕ:21.10.1994ರ ಸರ್ಕಾರಿ ಆದೇಶ ಸಂ:ಆಇ 48 ಮಕಮು 1994 ಮತ್ತು ಆಇ 6 ಮಕಮು 2012 ದಿನಾಂಕ:18.06.2012ರಲ್ಲಿ ಮುಂಗಡಗಳನ್ನು ಮಂಜೂರು ಮಾಡಲು ಅನುಸರಿಸಲಾಗುತ್ತಿರುವ ಷರತ್ತು ಮತ್ತು ನಿಬಂಧನೆಗಳು ಮುಂದುವರೆದು ಅನ್ವಯಿಸುತ್ತದೆ.

ಈ ಆದೇಶವನ್ನು ಆರ್ಥಿಕ ಇಲಾಖೆ (ಸೇವೆಗಳು-2) ಟಿಪ್ಪಣಿ ಸಂಖ್ಯೆ:ಆಇ 159 ಸೇ-2/2019 ದಿನಾಂಕ:29.04.2019ರಲ್ಲಿ ನೀಡಿರುವ ಸಹಮತಿಯನ್ವಯ ಹೊರಡಿಸಲಾಗಿದೆ.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ
ಮತ್ತು ಅವರ ಹೆಸರಿನಲ್ಲಿ

(ಪಿ.ಶಶಿಧರ)
ಸರ್ಕಾರದ ಅಧೀನ ಕಾರ್ಯದರ್ಶಿ
ಆರ್ಥಿಕ ಇಲಾಖೆ (ಆಡಳಿತ ಮತ್ತು ಮುಂಗಡಗಳು)

ಇವರಿಗೆ:

ಸಂಕಲನಕಾರರು. ಕರ್ನಾಟಕ ರಾಜ್ಯಪತ್ರ, ಮುಂದಿನ ಪ್ರಕಟಣೆಯಲ್ಲಿ ಪ್ರಕಟಿಸಲು.

ಪ್ರತಿ:

1. ಪ್ರಧಾನ ಮಹಾಲೇಖಪಾಲರು(ಲೆಕ್ಕಪತ್ರ ಮತ್ತು ತನಿಖೆ). ಕರ್ನಾಟಕ. ಬೆಂಗಳೂರು.
2. ಸರ್ಕಾರದ ಮುಖ್ಯ ಕಾರ್ಯದರ್ಶಿ/ಎಲ್ಲಾ ಅಪರ ಮುಖ್ಯ ಕಾರ್ಯದರ್ಶಿಗಳು/ಎಲ್ಲಾ ಪ್ರಧಾನ ಕಾರ್ಯದರ್ಶಿಗಳು/ ಎಲ್ಲಾ ಕಾರ್ಯದರ್ಶಿಗಳು.
3. ಎಲ್ಲಾ ಇಲಾಖಾ ಮುಖ್ಯಸ್ಥರುಗಳು.
4. ಎಲ್ಲಾ ಜಿಲ್ಲಾಧಿಕಾರಿಗಳು.
5. ಎಲ್ಲಾ ಜಿಲ್ಲಾ ಪಂಚಾಯತ್ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳು.
6. ರಿಜಿಸ್ಟ್ರಾರ್, ಕರ್ನಾಟಕ ಉಚ್ಚ ನ್ಯಾಯಾಲಯ. ಬೆಂಗಳೂರು.
7. ರಿಜಿಸ್ಟ್ರಾರ್, ಕರ್ನಾಟಕ ಲೋಕಾಯುಕ್ತ, ಬೆಂಗಳೂರು.
8. ರಿಜಿಸ್ಟ್ರಾರ್, ಕರ್ನಾಟಕ ಆಡಳಿತ ನ್ಯಾಯ ಮಂಡಳಿ. ಬೆಂಗಳೂರು.
9. ಕಾರ್ಯದರ್ಶಿ. ಕರ್ನಾಟಕ ಲೋಕ ಸೇವಾ ಆಯೋಗ. ಬೆಂಗಳೂರು.
10. ಕಾರ್ಯದರ್ಶಿ, ಕರ್ನಾಟಕ ವಿಧಾನಸಭೆ/ವಿಧಾನ ಪರಿಷತ್. ವಿಧಾನಸೌಧ. ಬೆಂಗಳೂರು.
11. ನಿರ್ದೇಶಕರು. ಖಜಾನೆ ಇಲಾಖೆ, ಬೆಂಗಳೂರು.
12. ಸರ್ಕಾರದ ಮುಖ್ಯ ಕಾರ್ಯದರ್ಶಿರವರ ಆಪ್ತ ಕಾರ್ಯದರ್ಶಿ- ಸಚಿವ ಸಂಪುಟ ಸಭೆ. ದಿನಾಂಕ:3.12.2018ರ ಸಭೆಯ ಕಾರ್ಯಸೂಚಿ ಕ್ರ.ಸಂ:13 (ಸಿ:703/2018)ರಲ್ಲಿನ ನಿರ್ಣಯದಂತೆ.
13. ಸರ್ಕಾರದ ಅಧೀನ ಕಾರ್ಯದರ್ಶಿಗಳು (ಎಫ್.ಆರ್ & ಬಿ.ಸಿ.ಸಿ), ಆರ್ಥಿಕ ಇಲಾಖೆ-ಕರ್ನಾಟಕ ಆರ್ಥಿಕ ಸಂಹಿತೆಗೆ ಸೂಕ್ತ ತಿದ್ದುಪಡಿ ಹೊರಡಿಸಲು ಕ್ರಮಕೈಗೊಳ್ಳಲು.
14. ಸರ್ಕಾರದ ಅಧೀನ ಕಾರ್ಯದರ್ಶಿ, ಆರ್ಥಿಕ ಇಲಾಖೆ(ಸೇವೆಗಳು-2), ವಿಧಾನಸೌಧ, ಬೆಂಗಳೂರು.
15. ಅಧ್ಯಕ್ಷರು, ಕರ್ನಾಟಕ ರಾಜ್ಯ ಸರ್ಕಾರಿ ನೌಕರರ ಸಂಘ. ಕಬ್ಬನ್ ಉದ್ಯಾನವನ. ಬೆಂಗಳೂರು.
16. ಆರ್ಥಿಕ ಇಲಾಖೆಯ ಗಣಕ ಕೋಶ-ಆರ್ಥಿಕ ಇಲಾಖೆಯ ವೆಬ್-ಸೈಟ್ ನಲ್ಲಿ ಅಪ್-ಲೋಡ್ ಮಾಡಲು.
17. ಕಛೇರಿ ಪ್ರತಿ / ಶಾಖಾ ರಕ್ಷಾ ಕಡತ / ಹೆಚ್ಚಿನ ಪ್ರತಿಗಳು.